# ಆಧಾರ್ ಕಾರ್ಡ್: ವರ್ಷದ ವ್ಯಕ್ತಿ

2017ರಲ್ಲಿ ಅತ್ಯಂತ ಹೆಚ್ಚು ಸುದ್ದಿ ಮಾಡಿದ್ದು ಆಧಾರ್ ಕಾರ್ಡ್. ದೇಶದಾದ್ಯಂತ ಕೋಟ್ಯಾಂತರ ಜನರಲ್ಲಿ ಈ ಕಾರ್ಡ್ ಉಂಟು ಮಾಡಿದ ಗೊಂದಲ ನೋಡಿದರೆ, ಈ ಕಾರ್ಡ್ ಖಂಡಿತವಾಗಲೂ ವರ್ಷದ ವ್ಯಕ್ತಿ ಆಯ್ಕೆಗೆ ಅರ್ಹವೆನ್ನಿಸುತ್ತದೆ.

ಬ್ಯಾಂಕ್ ವಹಿವಾಟು, ಗ್ಯಾಸ್ ಕನೆಕ್ಷನ್, ಮೊಬೈಲ್ ಕನೆಕ್ಷನ್, ಆಭರಣ ಖರೀದಿ– ಹೀಗೆ ಎಲ್ಲದಕ್ಕೂ ಈಗ ಆಧಾರ್ ಕಾರ್ಡ್ ನಂಬರನ್ನು ನೋಂದಣಿ ಮಾಡುವುದು ಕಡ್ಡಾಯವಾಗಿದೆ. 2017ರ ಮನಿ ಲಾಂಡರಿಂಗ್ ತಡೆ (ತಿದ್ದುಪಡಿ) ಕಾಯ್ದೆ ಪ್ರಕಾರ ಕೇಂದ್ರ ಸರ್ಕಾರ ಇದನ್ನು ಕಡ್ಡಾಯಗೊಳಿಸಿದೆ. ಹೀಗೆ ಕಡ್ಡಾಯಗೊಳಿಸಿದ್ದನ್ನು ವಿರೋಧಿಸಿ ಕೆಲವರು ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಿದ್ದೂ ಆಯಿತು. ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಲು ನಿರಾಕರಿಸಿದ ಸುಪ್ರಿಂಕೋರ್ಟ್ ಸರ್ಕಾರದ ನಿರ್ಧಾರ ಅಂತಿಮ ಎಂದಿತು. ಆದರೆ ಇಡೀ ವರ್ಷ ಈ ಕುರಿತ ಚರ್ಚೆ ಮುಂದುವರಿದೇ ಇದೆ.

ಜಾರ್ಖಂಡ್, ರಾಜಸ್ತಾನ ಮುಂತಾದ ರಾಜ್ಯಗಳಲ್ಲಿ ಆಧಾರ್ ಕಾರ್ಡ್ ಇಲ್ಲದವರಿಗೆ ರೇಷನ್ ನೀಡಲು ನಿರಾಕರಿಸಿದ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಕ್ರಮ ದೊಡ್ಡ ಸುದ್ದಿಯಾಯಿತು. ಅದರಲ್ಲೂ ಕುಟುಂಬಕ್ಕೆ ರೇಷನ್ ಸಿಗದೆ 11 ವರ್ಷದ ಸಂತೋಷಿ ಕುಮಾರಿ ಎಂಬ ಬಾಲಕಿ ಸಾವನ್ನಪ್ಪಿದ್ದು ಈ ಯೋಜನೆ ಜಾರಿಯ ಕುರಿತು ಗೊಂದಲಗಳನ್ನು ಹೆಚ್ಚಿಸಿತು. ಚಂಡೀಗಢದಲ್ಲಿ 28 ವರ್ಷದ ಮಹಿಳೆಯೊಬ್ಬರಿಗೆ ಆಧಾರ್ ಕಾರ್ಡ್ ಇಲ್ಲ ಎಂಬ ಕಾರಣಕ್ಕೆ ಗರ್ಭಪಾತ ಮಾಡಿಸಲು ಆಸ್ಪತ್ರೆಯೊಂದು ನಿರಾಕರಿಸಿದ್ದೂ ದೊಡ್ಡ ಸುದ್ದಿಯಾಯಿತು. ಈ ಮಧ್ಯೆ ಮರಣ ಪತ್ರ (ಡೆತ್ ಸರ್ಟಿಫಿಕೇಟ್) ಮತ್ತು ರೈಲ್ವೆ ಟಿಕೆಟ್ ಬುಕಿಂಗ್‌ಗೆ ಆಧಾರ್ ಕಡ್ಡಾಯ ಮಾಡಿದ್ದು ಜನರನ್ನು ತೀವ್ರ ಸಂಕಷ್ಟದಲ್ಲಿ ದೂಡಿ, ಕೊನೆಗೆ ಈ ಎರಡು ವಿಷಯಗಳಿಗೆ ಆಧಾರ್ ಕಡ್ಡಾಯವಿಲ್ಲ ಎಂದು ಸರ್ಕಾರ ಪ್ರಕಟಿಸಿತು.




ಈ ಮಧ್ಯೆ ಸುಮಾರು 200 ಸರ್ಕಾರಿ ವೆಬ್‌ಸೈಟ್‌ಗಳಲ್ಲಿ ಆಧಾರ್ ಕಾರ್ಡ್ ಹೊಂದಿದವರ ಎಲ್ಲ ವಿವರಗಳೂ ಸಾರ್ವಜನಿಕವಾಗಿ ಕಾಣಿಸಿಕೊಂಡದ್ದು, ವ್ಯಕ್ತಿಗಳ ಖಾಸಗಿ ಹಕ್ಕಿನ ಉಲ್ಲಂಘನೆಯಾಗುತ್ತಿದೆ ಎನ್ನುವ ಪ್ರತಿರೋಧಕ್ಕೆ ಬಲ ಒದಗಿಸಿತು. ಎಷ್ಟೋ ಸರ್ಕಾರಿ ವೆಬ್‌ಸೈಟ್‌ಗಳಲ್ಲಿ ಗೌಪ್ಯ ಪಾಲನೆಯ ವಿಧಾನಗಳ ಸುರಕ್ಷೆಯ ಬಗ್ಗೆ ಇನ್ನೂ ಅನುಮಾನಗಳು ಬಗೆಹರಿದಿಲ್ಲ.

12 ಅಂಕಿಗಳ ಈ ನಂಬರ್ ವರ್ಷವಿಡೀ ಭಾರತೀಯ ತಲೆ ತಿಂದದ್ದು ಸುಳ್ಳಲ್ಲ. ಆಧಾರ್ ಕಾರ್ಡ್ ನ ವೆಬ್‌ಸೈಟ್‌ಗೆ ಹೋಗಿ ನೋಡಿದರೆ 'ಉಚಿತ ಮತ್ತು ವಾಲಂಟರಿ' ಎಂಬ ಶಬ್ದಗಳು ಕಣ್ಣಿಗೆ ರಾಚುತ್ತವೆ. ಈ ವರ್ಷದ ಡಿಸೆಂಬರ್ ಒಳಗೆ ಬ್ಯಾಂಕ್ ಖಾತೆಗೆ ಆಧಾರ್ ನೋಂದಣಿ ಮಾಡದಿದ್ದರೆ ಅಕೌಂಟ್ ಸೀಝ್ ಆಗುತ್ತದೆ ಎನ್ನುವ ಸುದ್ದಿ ಹಬ್ಬಿತ್ತು. ಇದೀಗ ಆ 'ಅಂತಿಮ ಗಡುವು' ಮಾರ್ಚ್ 31ಕ್ಕೆ ಮುಂದುವರಿದಿದೆ. ವರ್ಷದ ಕೊನೆಯಲ್ಲಿ ಆಸ್ತಿ ನೋಂದಣಿಗೆ ಆಧಾರ್ ಕಾರ್ಡ್ ಕಡ್ಡಾಯವಲ್ಲ ಎಂದು ಸರ್ಕಾರ ಪ್ರಕಟಿಸಿದ್ದು ಎಷ್ಟೋ ಜನರಿಗೆ ನೆಮ್ಮದಿ ತಂದಿದ್ದರೂ, ಮನಿ ಲಾಂಡರಿಂಗ್ ನಿಯಂತ್ರಿಸುವ ಸರ್ಕಾರದ ಉದ್ದೇಶಗಳ ಬಗ್ಗೆ ಅನುಮಾನಗಳನ್ನು ಹುಟ್ಟು ಹಾಕಿದೆ! ಒಟ್ಟಾರೆ ಆಧಾರ್ ಕುರಿತ ಗೊಂದಲಗಳು ಮುಂದಿನ ವರ್ಷವೂ ಮುಂದುವರಿಯುವ ಸ್ಪಷ್ಟ ಸೂಚನೆಗಳಿವೆ.

(ಎನ್‌ಎಸ್‌ಡ)ಯಲ್ಲೂ ತರಬೇತಿ ಪಡೆದಾಕೆ. 12ನೇ ತರಗತಿಯಲ್ಲಿ ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ಇಡೀ ರಾಷ್ಟ್ರಕ್ಕೇ ಇಂಗ್ಲಿಷ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದೂ ಈಕೆಯ ಪ್ರತಿಭೆಗೆ ಹಿಡಿದ ಕೈಗನ್ನಡಿ.

ಸಾಮಾಜಿಕ ಸೇವೆಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಮಾನುಷಿ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಮುಟ್ಟಿನ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಲು ಈ ಹಿಂದೆಯೇ 'ಶಕ್ತಿ' ಎಂಬ ವಿಶೇಷ ಕಾರ್ಯಕ್ರಮ ರೂಪಿಸಿ ಸುದ್ದಿ ಮಾಡಿದ್ದರು. ಆ ಯೋಜನೆಯಲ್ಲಿ 20 ಹಳ್ಳಿಗಳ 5000 ಮಹಿಳೆಯರನ್ನು ಖುದ್ದಾಗಿ ಭೇಟಿಯಾಗಿ ಜಾಗೃತಿ ಮೂಡಿಸಿದ್ದರು. ಈಗ ವಿಶ್ವಸುಂದರಿ ಕಿರೀಟ ದಕ್ಕಿದ ಬಳಿಕ ಆಕೆಯ ಆ ಯೋಜನೆಗೆ ಹೆಚ್ಚು ಬಲ ಬಂದಿದೆ. ಹರಿಯಾಣ ರಾಜ್ಯ ಸರ್ಕಾರ ಈ ಯೋಜನೆಗೆ 18 ಕೋಟಿ ರೂಪಾಯಿಗಳ ನೆರವು ಪ್ರಕಟಿಸಿದ್ದು, ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳ ಹೆಣ್ಣುಮಕ್ಕಳಿಗೆ ಉಚಿತ ನ್ಯಾಪ್‌ಕಿನ್ ನೀಡುವುದಾಗಿ ಹೇಳಿದೆ. ಅನೀಮಿಯಾಮುಕ್ತ ಹರಿಯಾಣದ ರಾಯಭಾರಿಯಾಗಿಯೂ ಸರ್ಕಾರ ಈಕೆಯನ್ನು ನೇಮಕ ಮಾಡಿದೆ.

1966ರಲ್ಲಿ ಮೊತ್ತ ಮೊದಲ ಬಾರಿಗೆ ವಿಶ್ವಸುಂದರಿ ಕಿರೀಟ ಧರಿಸಿದ ಭಾರತೀಯೆ ರೀಟಾ ಫೇರಿಯಾ. ಈಕೆ ವೈದ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆ ಬಳಿಕ ವಿಶ್ವಸುಂದರಿ ಪಟ್ಟ ಗೆದ್ದ ಐಶ್ವರ್ಯ ರೈ, ಡಯಾನಾ ಹೇಡನ್, ಯುಕ್ತಾ ಮುಖಿ ಮತ್ತು ಪ್ರಿಯಾಂಕಾ ಚೋಪ್ರಾ ಎಲ್ಲರೂ ಬಾಲಿವುಡ್‌ಗೆ ಪ್ರವೇಶ ಪಡೆದು ಸುದ್ದಿ ಮಾಡಿದವರು. ಈ ಹಿನ್ನೆಲೆಯಲ್ಲಿ ಮಾನುಷಿಯೂ ಚಿತ್ರರಂಗ ಪ್ರವೇಶಿಸುವ ಬಗ್ಗೆ ಸುದ್ದಿ ಹರಡಿದೆ.

## 10 ಮಿಥಾಲಿ ರಾಜ್

ಭಾರತದ ಮಹಿಳಾ ಕ್ರಿಕೆಟ್ ತಂಡ ನಾಯಕಿ ಮಿಥಾಲಿ ರಾಜ್ ಈ ವರ್ಷ ತಾರಾಪಟ್ಟ ಪಡೆದು ಹೆಚ್ಚು ಸುದ್ದಿಯಲ್ಲಿದ್ದ ಮಹಿಳಾ ಅಥ್ಲೀಟ್. 2005 ಮತ್ತು 2007ರಲ್ಲಿ ಎರಡು ಬಾರಿ ಒಂದು ದಿನದ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ ಏಕೈಕ ಭಾರತೀಯಳು ಎಂಬ ದಾಖಲೆ ಅವರದ್ದು. ಸ್ಟ 7 ಸಲ 50 ರನ್‌ಗಳನ್ನು ಹೊಡೆದದ್ದು ಇನ್ನೊಂದು ದಾಖಲೆ. ಒಂದು ದಿನದ ಕ್ರಿಕೆಟ್ ನಲ್ಲಿ ಒಟ್ಟು 6000 ರನ್ ಗಳಿಸಿದ ವಿಶ್ವದ ಏಕೈಕ ಮಹಿಳಾ ಕ್ರಿಕೆಟರ್ ಈಕೆ. ಜೋಧ್‌ಪುರದಲ್ಲಿ ಹುಟ್ಟಿದ ಈ ತಮಿಳು ಮಾತೃಭಾಷೆಯ ಕ್ರಿಕೆಟಿಗೆ, ಹೋದಲ್ಲೆಲ್ಲ ಅಭಿಮಾನಿಗಳು ಮುತ್ತಿಗೆ ಹಾಕುವುದು ನೋಡಿದರೆ ಯಾವ ಸಿನಿಮಾ ತಾರೆಗೂ ಕಡಿಮೆಯಿಲ್ಲದ ವರ್ಚಸ್ಸು ಸಿಕ್ಕಿದಂತಿದೆ.



ಭಾರತದ ಗೂಢಚರ್ಯೆ ಸಂಸ್ಥೆ 'ರಾ'ದ ಪರವಾಗಿ ಗೂಢಚರ್ಯೆ ನಡೆಸಿದ ಆರೋಪದಲ್ಲಿ ಬಂಧಿತರಾಗಿ ಪಾಕಿಸ್ತಾನದ ಜೈಲಿನಲ್ಲಿರುವ ಕುಲಭೂಷಣ್ ಜಾಧವ್ ಈ ವರ್ಷ ವಿಭಿನ್ನ ಕಾರಣಕ್ಕಾಗಿ ಅತೀ ಹೆಚ್ಚು ಸುದ್ದಿಯಲ್ಲಿದ್ದ ವ್ಯಕ್ತಿ. ಪಾಕಿಸ್ತಾನದ ಕೋರ್ಟ್ ಈತನಿಗೆ ಮರಣ ದಂಡನೆಯ ಶಿಕ್ಷೆ ವಿಧಿಸಿರುವುದು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯ ವಿಷಯವಾಗಿದೆ.

2017 ಮಾಧ್ಯಮಗಳಿಗೆ ಸಾಕಷ್ಟು ಚರ್ಚೆಗೆ ಅವಕಾಶಗಳನ್ನು ಕೊಟ್ಟ ವರ್ಷ. ಆದರೆ ಬಹುತೇಕ ಗಂಭೀರ ವಿಷಯಗಳ ಚರ್ಚೆ, ಚುನಾವಣೆಯ ಅಬ್ಬರದಲ್ಲಿ ಮುಳುಗಿಹೋದದ್ದು ವಿಷಾದದ ಸಂಗತಿ. ಅದರಲ್ಲೂ ಚುನಾವಣೆಯ ಭಾಷಣಗಳಲ್ಲಿ ರಾಜಕಾರಣಿಗಳು ಪರಸ್ಪರರನ್ನು ಬೈಯಲು ನಿಘಂಟಿನಲ್ಲಿರುವ ಅತ್ಯಂತ ತುಚ್ಛ ಶಬ್ದಗಳನ್ನೆಲ್ಲ ಬಳಸಿ ಸಾರ್ವಜನಿಕ ಜೀವನವನ್ನು ಹೊಲಸೆಬ್ಬಿಸಿದ್ದು ಎದ್ದು ಕಂಡ ಅಂಶ.